Cement Supplied to Upper Krishna Project

772 SRI M. G. JARATARGHAR (Hubli)—Will the Minister of State for Major and Medium Irrigation be pleased to state.—

(a) whether it is a fact that loss of many lakhs of rupees has been caused to the Government towards dealings of large scale of Cement and other building materials under the Upper Krishna Project ;

(b) the number of persons against whom action has been taken in connection with the misappropriation of Rs. 2,87,823-00 in Shahapur canal work under the Upper Krishna Project ?

SRI B. B. CHIMMANAKATTI (Minister of State for Major and Medium Irrigation)—

(a) Contractors who were entrusted to supply Cement have not supplied about 2699.60 tonnes of Cement to the different divisions of the Upper Krishna Project Approximate cost of the cement which is not supplied is about Rs. 16.26 lakhs.

(b) Action has been taken against five persons in this regard.

ಶ್ರೀ ಎಂ. ಜಿ. ಜರ್ತಾರ್‌ಗರ್.—ಕೃಷ್ಣ ಮೇಲ್ದಂಡೆ ಯೋಜನೆಯ ಬಗ್ಗೆ ಮಂತ್ರಿಗಳು ಏನು ಹೇಳಿದ್ದಾರೆ ಅದನ್ನು ನಾನು ಒಪ್ಪಿದ್ದೇನೆ, ನನ್ನ ಲೆಕ್ಕದ ಪ್ರಕಾರ ೫೬ ಸಾವಿರ ಚೀಲ ಸಿಮೆಂಟ್ ಆಗುತ್ತದೆ. ಇದು ಯಾವ ಯಾವ ಫ್ಯಾಕ್ಟರಿಯಿಂದ ಪೂರೈಸಲಾಯಿತು ? ಮತ್ತು ಈ ಅವ್ಯವಹಾರಕ್ಕೆ ಸಂಬಂಧಪಟ್ಟಂತೆ ಯಾರಯಾರ ಮೇಲೆ ಏನೇನು ಕ್ರಮ ಕೈಗೊಂಡಿದ್ದೀರಿ ಎಂಬುದನ್ನು ಹೇಳುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಇಲ್ಲಿ ಲೆಕ್ಕದಲ್ಲಿರುವುದು ೨೬೯೯.೬೦ ಮೆಟ್ರಿಕ್ ಟನ್ ಸಿಮೆಂಟ್, ಬೇರೆಬೇರೆ ಸಿಮೆಂಟ್ ಫ್ಯಾಕ್ಟರಿಗಳು ಇರುತ್ತವೆ, ಬೇರೆಬೇರೆ ಕಂಟ್ರಾಕ್ಟರ್‌ಗಳು ಇರುತ್ತಾರೆ, ತಮಗೆ ಹೆಸರು ಬೇಕೆಂದರೆ ಪೂರ್ಣವಾಗಿ ಓದುತ್ತೇನೆ. ಆದರೆ ಇದು ಸ್ವಲ್ಪ ದೊಡ್ಡ ಪಟ್ಟಿ. ಅದು ಈರೀತಿ ಇದೆ.

Sl. No.	Division	Factory name	Carting Agent	Missing load Qty.	
1	2	3	4	5	
1.	Executive Engineer UKP, SBC. Dn. No.1, Gogi	ACC Cement factory Shahabad	M/s. Pannalal Agarwal	50.25	M. Tons
2.	Exe. Engineer, UKP.SBC No. 2, Bhimarayangudi	,,	,,	939.00	,,
3.	Exve. Engineer. Bldg., Construction Dn., B. Gudi.	CCI factory, Kurkunta	Pannalal Bros.	45.85	,,
		ACC, Shahabad	Dharmasingh	20.00	,,
4.	Exe. Engineer. Dn. No. 4, NLBC. Kembhavi	ACC, Shahabad	Pannalal Agarwal	1434.00	,,
5.	Exe. Engin er. Distri-butory Dn. No. 1, B. Gudi	ACC, Shahabad	Dharmasingh	10.00	,,
		CCI Kurkunta		17.50	,,
6.	Executive Engineer, UKP, NLBC Dn. 3, Hunsagi	Panyam cement, Karnool (AP)	Sangappa B Kolarhatti	20.00	,,
7.	Executive Engineer SBC, Distributory Dn. 2 Krishnapur	ACC, Shahabad	Nagappa S/o Dhodappa	50 00	,,
8.	Executive Engineer. UKP. AR Dn. No. 2, Hunsagi	Panyam Cement Karnool (AP)	Pannalal & Bros.	123.00	,,
				2699.60	

ಇದರ ಮೇಲೆ ಸರ್ಕಾರದವರು ಈಗಾಗಲೇ ಸುಮಾರು ೧೦ ಜನ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮವನ್ನು ಕೈಗೊಂಡಿದ್ದಾರೆ. ಅಂದರೆ ಸಸ್ಪೆಂಡ್ ಮಾಡಿದ್ದೇವೆ. ೬ ಜನರ ಮೇಲೆ ಪ್ರಾಸಿಕ್ಯೂಷನ್ ಆರ್ಡರ್ ಮಾಡಿದ್ದೇವೆ. ಇನ್ನೂ ೪ ಜನ ಸ್ಟೋರ್ ಕೀಪರ್ಸ್ ಮೇಲೂ ಪ್ರಾಸಿಕ್ಯೂಷನ್ ಪ್ರೊಸೀಡಿಂಗ್ಸ್ ಆಗುತ್ತಿದೆ. ಅವರಮೇಲೂ ಕೂಡ ಕ್ರಮವನ್ನು ಕೈಗೊಳ್ಳಲಾಗುತ್ತದೆ.

ಶ್ರೀ ಎಂ. ಜಿ. ಜರ್ತಾರ್‌ಗರ್.—ಯಾವ ವರ್ಷ ? ಯಾವ ಪೀರಿಯಡ್ ಎಂಬುದನ್ನು ಹೇಳುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಇದು ಸರ್ಕಾರದ ಗಮನಕ್ಕೆ ಬಂದಿದ್ದು ಯಾವಾಗ ಎಂಬುದನ್ನು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಬೇರೆಬೇರೆ ಡಿವಿಜನ್‌ಗಳಿವೆ, ಬೇರೆಬೇರೆ ತಾರೀಖುಗಳಿವೆ, ಬೇರೆ ಬೇರೆ ಕಂಟ್ರಾಕ್ಟರ್‌ಗಳಿದ್ದಾರೆ. ಅದನ್ನೆಲ್ಲಾ ಹೇಳುವುದು ಸ್ವಲ್ಪ ಕಷ್ಟವಾಗುತ್ತದೆ. ಒಟ್ಟಿನಲ್ಲಿ ೧೯೮೧ನೇ ಜನವರಿ ಅಥವಾ ಫೆಬ್ರವರಿ ತಿಂಗಳಲ್ಲಿ ಇದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಎಂ. ಸಿ. ನಾಣಯ್ಯ.—ಯಾವ ಯಾವ ತಾರೀಖಿನಲ್ಲಿ ಈ ಸಿಮೆಂಟ್‌ನ್ನು ತರುವುದಕ್ಕೆ ರೀಲೀಸ್ ಆರ್ಡರ್ ಕೊಟ್ಟಿದ್ದೀರಿ. ಯಾವ ಯಾವ ತಾರೀಖಿನಲ್ಲಿ ಸರ್ಕಾರಕ್ಕೆ ಸಿಮೆಂಟ್ ಬಂದಿಲ್ಲ. ಯಾವ ತಾರೀಖು ಮೊದಲನೇ ಬಾರಿಗೆ ಇದು ಗೊತ್ತಾಯಿತು ಎಂಬುದನ್ನು ಹೇಳುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಬೇರೆಬೇರೆ ಡಿವಿಜನ್‌ಗಳಿವೆ, ಬೇರೆಬೇರೆ ತಾರೀಖುಗಳಿವೆ, ಬೇರೆ ಬೇರೆ ಕಂಟ್ರಾಕ್ಟರ್‌ಗಳಿಗೆ ರಿಲೀಸ್ ಆರ್ಡರ್ ಕೊಟ್ಟಿದೆ, ಇದು ಸರ್ಕಾರದ ಗಮನಕ್ಕೆ ಬಂದಿರುವುದು ೧೯೮೧ನೇ ಜನವರಿ ಅಥವಾ ಫೆಬ್ರವರಿ ತಿಂಗಳಲ್ಲಿ.

SRI M. C. NANAIAH.—What was the time gap ? After how many months or how many years the Government came to know of it ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ನಮ್ಮ ಸರ್ಕಾರದ ಗಮನಕ್ಕೆ ಬಂದಕೂಡಲೇ ಅವರನ್ನು ಸಸ್ಪೆಂಡ್ ಮಾಡಿದ್ದೇವೆ.

ಶ್ರೀ ಎಂ. ಸಿ. ನಾಣಯ್ಯ.—ತಾವು ಯಾವತ್ತು ರಿಲೀಸ್ ಆರ್ಡರ್ ಕೊಟ್ಟಿದ್ದೀರಿ, ಯಾವತ್ತು ಸಿಮೆಂಟ್ ಬರಬೇಕಾಗಿತ್ತು ? ಏತಕ್ಕೆ ಬರಲಿಲ್ಲ ಎನ್ನುವ ಬಗ್ಗೆ ಡೇಟ್ಸ್ ಇರಬೇಕಲ್ಲವೆ ? ಈ ಪ್ರಕರಣ ಸರ್ಕಾರದ ಗಮನಕ್ಕೆ ಬರುವ ಹೊತ್ತಿಗೆ ಎಷ್ಟು ತಿಂಗಳು ಕಳೆದುಹೋಗಿತ್ತು ?

ಶ್ರೀ ಕಾಗೋಡು ತಿಮ್ಮಪ್ಪ.—ಇಂಡೆಂಟ್ ಕೊಡುವವರು ಎಕ್ಸಿಕ್ಯುಟಿವ್ ಇಂಜಿನಿಯರ್‌ರವರು, ಫ್ಯಾಕ್ಟರಿಯಿಂದ ನಮ್ಮ ಸ್ಟೋರ್ಸ್‌ಗೆ ಬರಬೇಕಾದರೆ ಡಿಸ್ಪೆನ್ಸ್ ನೋಡಿಕೊಂಡು ಅವರಿಗೆ ಟೈಂ ಕೊಡುತ್ತೇವೆ. ಅದು ಸ್ಟೋರ್ಸ್‌ಗೆ ಬರಬೇಕಾದರೆ ೩-೪ ದಿವಸ ಆದರೂ ಆಗುತ್ತದೆ. ಆದರೆ ಅಷ್ಟು ವಾಯಿದೆ ಕಳೆದುಹೋಗಿದೆ. ಅದು ಸ್ಟೋರ್ಸ್‌ಗೆ ಬರದೇ ಹೋಗಿದೆ. ಅಲ್ಲಿಗೆ ಅನಗೋಳ್ ಎನ್ನುವ ಚೀಫ್ ಇಂಜಿನಿಯರನ್ನು ಕಳೆದ ವರ್ಷ ಹಾಕಿದೆ. ಈ ಅವ್ಯವಹಾರ ಸಾರ್ವಜನಿಕರ ಮೂಲಕ ಮತ್ತು ಇನ್ನೂ ಕೆಲವರಿಂದ ಸರ್ಕಾರದ ಗಮನಕ್ಕೆ ಬಂತು. ಅದನ್ನು ಸಂಪೂರ್ಣವಾಗಿ ತನಿಖೆ ಮಾಡಿಹೇಳಬೇಕೆಂದರೆ ಯಾವಯಾವ ಸ್ಟೋರ್ಸ್‌ನಲ್ಲಿ ಎಷ್ಟೆಷ್ಟು ಕಡಿಮೆ ಬಂದಿದೆ, ಯಾರ್ಯಾರು ಡೆಲಿವರಿ ಮಾಡಿಲ್ಲ, ಎನ್ನುವ ಬಗ್ಗೆ ಸರ್ಕಾರಕ್ಕೆ ವರದಿ ಬಂದಮೇಲೆ ಒಂದೆರಡು ತಿಂಗಳುಗಳಲ್ಲಿ ನಾವು ಕ್ರಮವನ್ನು ತೆಗೆದುಕೊಂಡಿದ್ದೇವೆ ಅನಗೋಳ್ ಎನ್ನುವವ್ಹೀಚೀಫ್ ಇಂಜಿನಿಯರ್ ಅಲ್ಲಿಗೆ ಹೋಗಂವುದಕ್ಕಿಂತ ಮುಂಚಿತವಾಗಿ ಸರಿಯಾದ ವರದಿಯನ್ನು ಹಿಂದಿನವರು ಕೊಟ್ಟಿರಲಿಲ್ಲ. ಆದ್ದರಿಂದ ಈ ಕಾರ್ಯ ಸ್ವಲ್ಪ ತಡವಾಯಿತು.

ಶ್ರೀ ಎಂ. ಸಿ. ನಾಣಯ್ಯ.— ಅನಗೋಳ್ ಸಾಹೇಬರನ್ನು ನೀವು ಯಾವಾಗ ಕಳುಹಿಸಿದಿರಿ ? ಅವರು ವರದಿಯನ್ನು ಕಳುಹಿಸಿದ್ದಾರೆಯೆ ? ಯಾವ ತಾರೀಖಿನಲ್ಲಿ ವರದಿ ಬರಬೇಕಾಗಿತ್ತು ಮತ್ತು ಅದು ಸರ್ಕಾರಕ್ಕೆ ಬರುವುದಕ್ಕೆ ಎಷ್ಟು ತಿಂಗಳಾಯಿತು ? ಈ ವಿಚಾರಗಳೆಲ್ಲಾ ತಮಗೆ ಗೊತ್ತಿರಬೇಕಲ್ಲವೆ ? ಆ ವರದಿಯಲ್ಲಿ ಇದೆಲ್ಲಾ ಇರಬೇಕಲ್ಲವೆ ? ಬಹುಶಃ ನಿಮ್ಮ ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳು, ಸೂಪರಿಂಟೆಂಡೆಂಟ್ ಇಂಜಿನೀಯರ್ ಎಷ್ಟು ತಿಂಗಳವರೆಗೆ ಅಮಾನತ್ತಿನಲ್ಲಿ ಇಡಲಾಗಿತ್ತು ಎಂಬುದನ್ನೆಲ್ಲಾ ನಾವು ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ (ಲೋಕೋಪಯೋಗಿ ಇಲಾಖೆ ಮಂತ್ರಿಗಳು).—ಇದು ವಾಸ್ತವವಾಗಿ ನಮ್ಮ ಸ್ಟೋರ್ಸ್‌ಗೆ ಯಾವ ತಾರೀಖಿನಲ್ಲಿ ಬರಬೇಕೆಂದು ನಿಗದಿ ಮಾಡಿರುತ್ತೇವೆ. ಅವತ್ತು ಅದು ಬಂದಿದ್ದರೆ ತಕ್ಷಣ ಎಕ್ಸಿಕ್ಯುಟಿವ್ ಇಂಜಿನಿಯರ್ ಅಥವಾ ಸೂಪರಿಂಟೆಂಡೆಂಟ್ ಇಂಜಿನಿಯರ್‌ಗಳು ಸೂಕ್ಷ್ಮ ಕ್ರಮ ಕೈಗೊಂಡು ನಮಗೆ ವರದಿ ಮಾಡಬೇಕಾಗಿತ್ತು. ಈ ಕೆಲಸ ಸ್ಥಳೀಯ ಮಟ್ಟದಲ್ಲಿ ಆಗಲಿಲ್ಲ. ಒಬ್ಬಿಬ್ಬರು ಅಧಿಕಾರಿಗಳು ಎಲ್ಲೋ ಹಿಡಿದರು ಅಂತ ತಿಳಿದುಕೊಂಡು ಅವರಮೇಲೆ ಕಂಟ್ರಾಕ್ಟರ್‌ಗಳ ಮೇಲೆ ಕಂಪ್ಲೈಂಟ್ ಲಾಡ್ಜ್ ಮಾಡಿದರು. ವಾಸ್ತವವಾಗಿ ಈ ವಿಚಾರ ಸರ್ಕಾರಕ್ಕೆ ಸಕಾಲದಲ್ಲಿ ತಿಳಿಯದೇ ಹೋದುದರಿಂದ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಆಗಿರಲಿಲ್ಲ. ಸ್ಥಳೀಯ ಅಧಿಕಾರಿಗಳು ಸರ್ಕಾರಕ್ಕೆ ತಿಳಿಸುವುದರಲ್ಲಿ ಮತ್ತು ಆಯಾಯ ದಿವಸ ಆಯಾಯ ಸ್ಟೋರ್ಸ್‌ಗೆ ಸಿಮೆಂಟ್ ಬಂದಿದೆಯೋ ಇಲ್ಲವೋ ಎಂಬುದನ್ನು ತಿಳಿದುಕೊಳ್ಳಲು ತಪ್ಪಿದ ಕಾರಣದಿಂದಾಗಿ ಇದು ತಡವಾಯಿತು. ಆದರೂ ನಾವು ಈ ಕ್ರಮವನ್ನು ಕೈಗೊಂಡಿದ್ದೇವೆ.

ಶ್ರೀ ಹೆಚ್. ಗಂಗಾಧರನ್.—ವಿವಿಧ ಭಾಗಗಳಿಗೆ ಸಿಮೆಂಟ್ ತಲುಪಿಲ್ಲವೆಂದು ಹೇಳಿದ್ದೀರಿ. ಯಾವಯಾವ ತಾರೀಖಿನಲ್ಲಿ ಯಾವಯಾವ ಭಾಗಗಳಿಗೆ ಅದು ತಲುಪಬೇಕಾಗಿತ್ತು ಎನ್ನುವ ಬಗ್ಗೆ ಒಂದು ಪಟ್ಟಿಯನ್ನು ಕೊಡುತ್ತೀರಾ ?

ಶ್ರೀ ಕಾಗೋಡು ತಿಮ್ಮಪ್ಪ.—ಯಾವ ಯಾವ ಭಾಗಗಳಿಗೆ ಯಾವ ಯಾವ ತಾರೀಖು ಸಿಮೆಂಟ್ ತಲುಪಬೇಕಾಗಿತ್ತು, ಮತ್ತು ಯಾವಾಗ ಈ ಕಂಟ್ರಾಕ್ಟರ್‌ಗಳು ಕೇಳಿದ್ದರು ಎನ್ನುವ ಬಗ್ಗೆ ಲಿಸ್ಟನ್ನು ಕಳುಹಿಸಿಕೊಡುತ್ತೇನೆ.

ಶ್ರೀ ಬಿ. ಬಿ ಚಿಮ್ಮನಕಟ್ಟಿ.—ಇದು ಒಂದು ದೊಡ್ಡ ಪಟ್ಟಿಯೇ ಇದೆ. ಮಾನ್ಯ ಸದಸ್ಯರು ಬೇಕೆಂದು ಕೇಳಿದರೆ ಒದಗಿಸುತ್ತೇವೆ. ಈ ವಿಚಾರದಲ್ಲಿ ಡಿಲೇ ಆಗಿರುವುದರಿಂದ ಅಧಿಕಾರಿಗಳ ಮೇಲೆ ನಾವು ಕ್ರಮ ಕೈಗೊಂಡಿದ್ದೇವೆ. ಇದನ್ನು ತಾವೂ ತಿಳಿದುಕೊಳ್ಳಬೇಕು. ಒಂದುವೇಳೆ ಅವರೇನಾದರೂ ಡಿಲೇ ಮಾಡದೇ ಇದ್ದಿದ್ದರೆ ಅವರಮೇಲೆ ನಾವು ಕ್ರಮ ಕೈಗೊಳ್ಳಬೇಕಾಗಿರಲಿಲ್ಲ. ಷಾರ್ಟ್ ಡೆಲಿವರಿ ಮಾಡಿದ್ದಾರೆ ಮತ್ತು ಡಿಲೇ ಮಾಡಿದ್ದಾರೆ ಎಂದು ತಿಳಿದುಬಂದಿದ್ದರಿಂದ ಅವರಮೇಲೆ ಕ್ರಮ ತೆಗೆದು ಕೊಂಡಿದ್ದೇವೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಎಷ್ಟು ಡಿಲೇ ಆಗಿದೆ ಎಂಬ ಬಗ್ಗೆ ನಮಗೆ ಒಂದು ಸ್ಟೇಟ್‌ಮೆಂಟನ್ನು ಕೊಡಬೇಕು. ಸಿಮೆಂಟ್‌ಗೆ ಇಂಡೆಂಟ್ ಕೊಟ್ಟಿದ್ದು ಯಾವ ದಿವಸ, ಸಿಮೆಂಟ್‌ನ್ನು ಡೆಲಿವರಿ ಮಾಡಬೇಕಾಗಿತ್ತು ಎನ್ನುವ ಬಗ್ಗೆ ಈ ಸದನಕ್ಕೆ ಅಂಕಿ ಅಂಶಗಳನ್ನು ಒದಗಿಸಬೇಕು.

ಇನ್ನು ಎರಡನೆಯದಾಗಿ ಇಷ್ಟು ದೊಡ್ಡ ಮೊತ್ತ ಸಿಮೆಂಟ್‌ನ್ನು ಈರೀತಿ ಫ್ಯಾಕ್ಟರಿಯಿಂದ ಡೆಲಿವರಿ ತೆಗೆದುಕೊಂಡಿದ್ದೂ ಸರ್ಕಾರಕ್ಕೆ ಕೊಡದೇ ಇರುವ ಬಗ್ಗೆ ಅಧಿಕಾರಿಗಳ ಮೇಲೆ, ಕಂಟ್ರಾಕ್ಟರ್‌ಗಳ ಮೇಲೆ ಕ್ರಮ ಕೈಗೊಂಡಿದ್ದೀರಿ. ಅವತ್ತು ಬ್ಲಾಕ್ ಮಾರ್ಕೆಟ್‌ನಲ್ಲಿ ಒಂದು ಸಿಮೆಂಟ್ ಮೂಟೆಗೆ ೭೦–೮೦ ರೂ.ನಂತೆ ಮಾರಾಟವಾಗಿದೆ. ನಿಮ್ಮ ಪ್ರಕಾರ ಅಂದರೆ ೩೦ ರೂ.ನಂತೆ ಸುಮಾರು ೧೬ ಲಕ್ಷ ರೂ. ಆಗುತ್ತದೆ. ಆದರೆ ಅಲ್ಲಿ ೭೦–೮೦ ರೂ. ಪ್ರಕಾರ ಮಾರಾಟ ಮಾಡಿರುವುದರಿಂದ ಸುಮಾರು ೧ ಕೋಟಿ ರೂ.ಗಳಷ್ಟು ಲಾಭವನ್ನು ಅವರು ಮಾಡಿಕೊಂಡಿದ್ದಾರೆ. ಈ ಹಣವನ್ನು ವಸೂಲ್ಮಾಡುವುದಕ್ಕೆ ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ತಿಳಿಸುತ್ತೀರಾ ಸ್ವಾಮಿ? ಕ್ರಿಮಿನಲ್ ಕೇಸ್ ಹಾಕಿದ್ದರೂ, ಅದು ನಡೆಯುತ್ತಿದ್ದರೂ ಹಣ ರಿಕವರಿಗೆ ಏನು ಮಾಡಿದ್ದೀರಿ ಎಂದು ಕೇಳುತ್ತೇನೆ ?

ಶ್ರೀ ಕಾಗೋಡು ತಿಮ್ಮಪ್ಪ.—ಈಗಾಗಲೇ ವಿಜಿಲೆನ್ಸ್ ಕಮಿಷನ್ ತನಿಖೆ ನಡೆಯುತ್ತಿದೆ. ನಾನಂ ಈಗ ಬರಬೇಕಾದರೆ ಇದೇ ವಿಚಾರದಲ್ಲಿ ಪ್ರಸ್ತಾಪ ಮಾಡಿದ್ದೇನೆ ಅವರಿಂದ ವರದಿ ಬರುತ್ತದೆ. ವಿಜಿಲೆನ್ಸ್ ಕಮಿಷನ್ ಅವರು ಯಾವ ತರಹ ಸಲಹೆ ಮಾಡುತ್ತಾರೆ ಅದರಂತೆ ಕ್ರಮ ಕೈಗೊಳ್ಳುತ್ತೇವೆ ಆದ್ದರಿಂದ ಸಂಪೂರ್ಣವಾಗಿ ತನಿಖೆಯಾಗುವವರೆಗೆ ತಾವು ಸ್ವಲ್ಪ ಕಾಯಬೇಕಾಗುತ್ತದೆ. ಕಂಟ್ರಾಕ್ಟರ್ ಒಬ್ಬರು ಯಾರು ಇದ್ದಾರೆ ಅವರಮೇಲೆ ಈಗಾಗಲೇ ನಾವು ಪ್ರಾಸಿಕ್ಯೂಷನ್ ಮಾಡಿದ್ದೇವೆ. ಆದ್ದರಿಂದ ವಿಜಿಲೆನ್ಸ್ ವರದಿ ಬಂದಮೇಲೆ ತಾವು ಹೇಳಿದರೀತಿಯಲ್ಲಿ ಅವರಮೇಲೆ ಯಾವ ರೀತಿ ಕ್ರಮ ಕೈಗೊಳ್ಳಬೇಕೋ ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಅದರಲ್ಲಿ ರೆಕಾರ್ಡ್‌ಇದೆ, ವಿಜಿಲೆನ್ಸ್‌ಗೆ ಕೊಡತಕ್ಕಂಥ ಅವಶ್ಯಕತೆ ಇರಲಿಲ್ಲ. ವಿಜಿಲೆನ್ಸ್‌ಗೆ ಒಪ್ಪಿಸುವುದೆಂದರೆ ಮುಂದೆ ಹಾಕತಕ್ಕಂಥ ಒಂದು ತಂತ್ರವೆಂದು ನಮಗೆ ಭಾವನೆಯಾಗಿದೆ. ತನಿಖೆಯಾಗಬೇಕೆಂದರೆ ೪–೫ ವರ್ಷಗಳಾದರೂ ಆಗಬಹುದು. ೭ ವರ್ಷಗಳಾದರೂ ಆಗಬಹುದು. ಈರೀತಿಯಾಗಿ ಡಿಲೆಯಾಗಿರತಕ್ಕಂಥ ಪ್ರಕರಣಗಳು ಎಷ್ಟೋ ಇವೆ. ವಿಜಿಲೆನ್ಸ್ ಕಮಿಷನ್‌ಗೆ ಸರ್ಕಾರ ಕಳಂಹಿಸಿದಮೇಲೆ ಆರಾರು ಏಳೇಳು ವರ್ಷಗಳು ಹಿಡಿಯುತ್ತಿದೆ. ಅಷ್ಟು ವರ್ಷಗಳವರೆಗೆ ಕಂಟ್ರಾಕ್ಟರ್ ಆಸ್ತಿಯೆಲ್ಲ ಹೋಗಿಬಿಡುತ್ತದೆ, ಅದರ ಬಗ್ಗೆ ಕ್ರಮ ಕೈಗೊಳ್ಳಬೇಕು. ಪಬ್ಲಿಕ್ ಅಕೌಂಟ್ಸ್ ಸಮಿತಿಯವರು ಕೂಡ ಇದರಬಗ್ಗೆ ರಿಪೋರ್ಟ್ ಕೊಟ್ಟು ಈಗಾಗಲೇ ತಿಂಗಳು ಆಗಿದೆ. ಆದ್ದರಿಂದ Immediately for security purpose ಅವನ ಆಸ್ತಿಯನ್ನು ಮುಟ್ಟುಗೋಲು ಹಾಕಿದ್ದೀರಾ ? ವಿಜಿಲೆನ್ಸ್ ರಿಪೋರ್ಟ್‌ಕೊಟ್ಟ ಮೇಲೆ ಅಟ್ಯಾಚ್‌ಮೆಂಟ್ ಇಲ್ಲದೆ ಹೋದರೆ ಎಲ್ಲ ಆಸ್ತಿಯನ್ನು ಮಾರಾಟಮಾಡಿಬಿಡುತ್ತಾನೆ. ಆಮೇಲೆ ನಿಮಗೆ ಏನೂ ಸಿಗುವುದಿಲ್ಲ. ಕಂಟ್ರಾಕ್ಟರ್ ಯಾರು ಡೆಲಿವರಿ ತೆಗೆದುಕೊಂಡಿರುತ್ತಾನೆ. ಅವನು ಎಲ್ಲ ಆಸ್ತಿಯನ್ನು ಮಾರಾಟಮಾಡಿದಮೇಲೆ ತಾವು ಏನು ಮಾಡುತ್ತೀರಿ ? ದಯವಿಟ್ಟು Have you taken any steps to attach his property to assure recovery ? ಏನಾದರು ಮಾಡಿದ್ದೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಸದಸ್ಯರು, ತಾವು ಹೇಳಿದ ಪ್ರಕಾರ ಅವರ ಸೆಕ್ಯೂರಿಟಿ ಡಿಪಾಸಿಟ್ ಕೂಡ ವಿತೋಲ್ಡ್ ಮಾಡಿದ್ದೇವೆ.

SRI. A. LAKSHMISAGAR.—It is a nominal amount, which he can forego. He would have sold or alienated all his properties and only tamburi will be available for the Government to recover.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಅಧ್ಯಕ್ಷರೇ ಅವರ ಪೇಮೆಂಟ್ ಮತ್ತು ಪ್ರಾಪರ್ಟಿ ಎಲ್ಲವನ್ನು ಅಟ್ಯಾಚ್‌ಮೆಂಟ್ ಮಾಡಬೇಕೆಂದು ಹೇಳಿದ್ದಾರೆ. ನಾವು ಅವರ ಡಿಪಾಸಿಟ್‌ನ್ನು ರೆವಿನ್ಯೂ ಡಿಪಾರ್ಟ್‌ಮೆಂಟ್ ಮೂಲಕ ಈಗಾಗಲೇ ಅಟ್ಯಾಚ್‌ಮೆಂಟ್ ಮಾಡಲಂ ಬರೆದಿದ್ದೇವೆ. ಮತ್ತೆ ಅವರನ್ನು ಅರೆಸ್ಟ್ ಕೂಡ ಮಾಡಿಸಿದ್ದೇವೆ. ಅರೆಸ್ಟ್ ಮಾಡಿ ಈಗ ಅವರನ್ನು ಬೈಲ್ ಮೇಲೆ ಬಿಟ್ಟಿದ್ದಾರೆ.

SRI M. C. NANAIAH.—Will the Government give us an assurance to see that the arresting of these persons is only a criminal process and as far as the recovery of the money is concerned, will it immediately file a civil suit and take attachment of the property to the extent of the total amount covered under this and take immediate action ?

SRI B. B. CHIMMANAKATTI.—We will pursue the matter.

ಶ್ರೀ ಎಸ್. ಆರ್. ಬೊಮ್ಮಾಯಿ.—ಸರ್ಕಾರಕ್ಕೆ ಗೊತ್ತಾಗಿ ಎರಡು ವರ್ಷ ವಾಗಿರುತ್ತದೆ. ಎರಡು ವರ್ಷಗಳಾದರೂ ರಿಕವರಿ ಬಗ್ಗೆ ತೆಗೆದುಕೊಂಡ ಕ್ರಮವೇನು. ? ಅದು ಬಹಳ ಮುಖ್ಯವಾದುದು. ಈಗ ವಿಜಿಲೆನ್ಸ್ ರಿಪೋರ್ಟ್ ಮಾಡಿದ ಮೇಲೆ ರಿಕವರಿ ಸಲುವಾಗಿ ಏನು ಆಕ್ಷನ್ ತೆಗೆದು ಕೊಂಡಿದ್ದೀರಿ? ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆಎಂದು ಬರೆದಿದ್ದೀರಿ ? ಅವರು ಏನಾದರೂ ಅಟ್ಯಾಚ್‌ಮೆಂಟ್ ಮಾಡಿದ್ದಾರೆಯೇ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ವಿಜಿಲೆನ್ಸ್‌ಗೆ ನಾವು ಕೊಟ್ಟಿರತಕ್ಕಂಥ ಡೇಟ್ ಬಗ್ಗೆ ನಾನು ಅನಂತರ ಒದಗಿಸಿಕೊಡುತ್ತೇನೆ. ಏತಕ್ಕೆಂದರೆ ವಿಜಿಲೆನ್ಸ್‌ಗೆ ಬೇರೆ ಬೇರೆ ಡೇಟ್‌ಗಳಲ್ಲಿ ನಾವು ರೆಫರ್ ಮಾಡಿದ್ದೇವೆ. ಬೇಕಿದ್ದರೆ ಅದನ್ನು ನಂತರ ಒದಗಿಸಿಕೊಡುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಎಲ್ಲ ಪ್ರಕರಣಗಳನ್ನು ಒಂದೊಂದಾಗಿ ಕೊಟ್ಟಿರುತ್ತೇವೆ. ಅದು ಬಂದ ತಕ್ಷಣ ನಾವು ಇಟ್ಟುಕೊಳ್ಳುವುದಕ್ಕೆ ಹೋಗುವುದಿಲ್ಲ. ಬಹುಶಃ ಮಿಸ್‌ಲೆಸ್ ಆಗಿ ಡಿಲೇ ಮಾಡುವುದಕ್ಕೆ ಹೋಗಿದ್ದೀರಿ. ಆಮೇಲೆ ಅನೇಕ ಜನ ಅನ್ಯಾಯವಾಗಿ ಹೋಯಿತು. ಎಂದೆಲ್ಲಾ ಹೇಳಿ

ದ್ದಾರೆ. ವರದಿ ಬಂದ ಮೇಲೆ ಅನ್ಯಾಯ ಏತಕ್ಕೆ ಆಯಿತು ಎಂದು ಗೊತ್ತಾಗುತ್ತದೆ. ಆದ್ದರಿಂದ ನಾವೂ ಕೂಡ ಇದರ ಬಗ್ಗೆ ಪ್ರಯತ್ನ ಮಾಡುತ್ತಿದ್ದೇವೆ. ಜೊತೆಗೆ ವಿಜಿಲೆನ್ಸ್ ಕಮಿಷನರ್‌ಗೆ ಏತಕ್ಕೆ ರೆಸ್ಪಾನ್ಸಿಬಿಲಿಟಿ ಫಿಕ್ಸ್ ಮಾಡಬೇಕಾಗುತ್ತದೆ ? ಎಲ್ಲ ಆಫೀಸರ್‌ಗಳು ರೆಸ್ಪಾನ್ಸಿಬಲ್ ಆಗಬೇಕಾದರೆ ಕಾಂಟ್ರಾಕ್ಟರ್ ಕೂಡ ರೆಸ್ಪಾನ್ಸಿಬಲ್ ಆಗಬೇಕಾಗುತ್ತದೆ. ರೆಸ್ಪಾನ್ಸಿಬಿಲಿಟಿ ಎಲ್ಲರಿಗೂ ವಹಿಸಿದ್ದೇವೆ. ಅವರು ತನಿಖೆ ಮಾಡುತ್ತಾರೆ. ನಾನು ಈವತ್ತು ಕೂಡ ಬರಬೇಕಾದರೆ ಸೆಕ್ರೆಟರಿಯವರನ್ನು ಕರೆಸಿ ಇದು ಬಹಳ ತಡವಾಗುತ್ತಿದೆ ಈ ರೀತಿ ಆಗಬಾರದು. ನಾವು ಯಾವ ರೀತಿ ನ್ಯಾಯ ತರುವುದಕ್ಕೆ ಆಗುವುದಿಲ್ಲ. ತಾವು ಎಷ್ಟು ದಿವಸಗಳಲ್ಲಿ ಪೂರೈಸುತ್ತೀರಿ ಎನ್ನುವ ಬಗ್ಗೆ ತಕ್ಷಣ ಕರೆಸಿ ಮಾತನಾಡಿ ಎಂದು ಹೇಳಿರುತ್ತೇನೆ. ವರದಿಯನ್ನು ತರಿಸಿಕೊಳ್ಳಬೇಕೆಂಬುದರ ಬಗ್ಗೆ ನಿಮಗೆ ಎಷ್ಟು ಕಾತುರತೆ ಇದೆಯೋ ಅಷ್ಟೇ ಕಾತುರತೆ ನಮಗೂ ಇದೆ.

SRI A. LAKSHMISAGAR.—The Chief Engineer gave evidence before the PAC. He has said that on a suspicion a close watch was kept on the contractor's transporting the cement from the factory to the work-spot and it is evident, as clear, as day light, that it is the contractors, may be others are connected with this, primarily it is the contractors' respons bility to transport cement from the factories to the work spot. Now, all this will mean delay only and the Government will not be in a position to recover any money, not even a paise. That appears to be the intention of the Government. Two years have elapsed now and the answer is that the matter is before the Vigilance Commission. Government does not appear to be serious about it and the work is held up.

SRI KAGODU THIMMAPPA.—We are equally serious about those things. That is why so many officiers are kept under suspension.

SRI A. LAKSHMISAGAR.—Your own explanation betrays lack of responsibility.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಿಮೆಂಟ್ ಟ್ರಾನ್ಸ್‌ಪೋರ್ಟ್ ಮಾಡುವುದಕ್ಕೆ ಕೊಟ್ಟಿದ್ದೀರಿ, ಅವನಿಗೆ ಕೊಟ್ಟನೆಂಲೆ ರೆಸ್ಪಾನ್ಸಿಬಿಲಿಟಿ ಫಿಕ್ಸ್ ಮಾಡುವುದಕ್ಕೆ ಎಷ್ಟು ವರ್ಷಗಳು ಬೇಕೆಂದು ಸರ್ಕಾರಕ್ಕೆ ಕೇಳುತ್ತೇನೆ. ಈ ರೀತಿ ಕಾಂಟ್ರಾಕ್ಟರ್ ಇದ್ದಾರೆ ಆ ರೀತಿ ಕಾಂಟ್ರಾಕ್ಟರ್ ಇದ್ದಾರೆ,ಡಿಲಿವರಿ ಮಾಡದಿದ್ದಕ್ಕೆ ವಿಜಿಲೆನ್ಸ್‌ಗೆ ಕೊಟ್ಟಿದ್ದೇವೆ ಎಂದರೆ ಇದು ಏನು ಬುದ್ಧಿವಂತಿಕೆ ಸ್ವಾಮಿ ? Just to project the contractors. ಅವರ ಆಸ್ತಿಯನ್ನು ಅಟ್ಯಾಚ್ ಮಾಡುವುದಕ್ಕೆ ಹಿಂದೆ ಮುಂದೆ ಏತಕ್ಕೆ ನೋಡುತ್ತಿದ್ದೀರಿ. ಅವರಿಗೆ ರ್ಣ ಕೊಡುತ್ತಿದ್ದೀರಿ ಅವರು ಸ್ಮಾಲ್ ಕಂಟ್ರಾಕ್ಟ್ ಇದ್ದಾರೆ ಅವರು ಫ್ಯಾಕ್ಟರಿಯಿಂದ ತಂದುಕೊಡಬೇಕು ಅಗ್ರಿಮೆಂಟ್ ಕೂಡ ಅವನು ಕೊಟ್ಟಿದ್ದಾನೆ, ಫ್ಯಾಕ್ಟರಿಯಿಂದ ತಂದು ಕೊಟ್ಟಿಲ್ಲ. ಅವನ ಮೇಲೆ ಆಕ್ಷನ್ ತೆಗೆದುಕೊಳ್ಳುವುದಕ್ಕೆ ಎರಡು ವರ್ಷಗಳು ಏತಕ್ಕೆ ಬೇಕು. ವಿಜಿಲೆನ್ಸ್‌ಗೆ ಏತಕ್ಕೆ ರೆಫರ್ ಮಾಡಬೇಕು, ? ವಿಜಿಲೆನ್ಸ್‌ಗೆ ರೆಫರ್ ಮಾಡತಕ್ಕಂಥ ಅವಶ್ಯಕತೆ ಏನು ಇತ್ತು ? Any ordinary Sub-Inspector can prosecute so far as the criminal aspect is concerned. Now, according to the agreement he has to deliver ಡಿಲಿ ಏತಕ್ಕೆ ಮಾಡಬೇಕು ?ಲೀಗಲ್ ಆಕ್ಷನ್ ತೆಗೆದುಕೊಳ್ಳಲು ವಿಜಿಲೆನ್ಸ್‌ಗೆ ಏತಕ್ಕೆ ರೆಫರ್ ಮಾಡಬೇಕು. ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ ಕಾಂಟ್ರಾಕ್ಟರನ್ನು ಉಳಿಸಿಕೊಳ್ಳಬೇಕೆಂಬ ಕಾರಣ ನಮಗೆ ಏನೂ ಇಲ್ಲ. ಏತಕ್ಕೆಂದರೆ ಆ ಕಾಂಟ್ರಾಕ್ಟರ್ ನಮ್ಮ ಜಾತಿಯವನಲ್ಲ. ನಮ್ಮ ಸಂಬಂಧಿಕನಲ್ಲ, ಸ್ನೇಹಿತನೂ ಅಲ್ಲ. ನಮ್ಮ ಪಕ್ಷದವನೂ ಅಲ್ಲ ಅವನನ್ನು ನೋಡಿದವರೂ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ —ಎರಡು ವರ್ಷ ಕೊಡಲಿಕ್ಕೆ ಕಾರಣವೇನು ಸ್ವಾಮಿ.

ಶ್ರೀ ಕಾಗೋಡು ತಿಮ್ಮಪ್ಪ.—ಅದನ್ನು ಕಂಡುಹಿಡಿಯಬೇಕಾಗಿದೆ. ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಿಮಗೆ ಎಷ್ಟು ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ಸರ್ಕಾರಕ್ಕೂ ಕೂಡ ಇದೆ. ಆ ದಿಸೆಯಲ್ಲಿ ಕೆಲಸ ಮಾಡುತ್ತಿದ್ದೇವೆ ಒತ್ತೊಟ್ಟಿಗೆ ವಿಜಿಲೆನ್ಸ್ ಕಮಿಷನ್‌ಗೆ ಕಳುಹಿಸಿದಾಗ ಅದು ಬಾರದೆ ಇದ್ದರೆ ನಮಗೆ ಬರತಕ್ಕಂಥ ತೊಂದರೆ ಇದು. ಆದಕ್ಕೋಸ್ಕರವಾಗಿ ತಕ್ಷಣ ಏನೇನು ಮಾಡಬೇಕು ಅದನ್ನು ಮಾಡಲು ಈವತ್ತು ಕೂಡ ನಮ್ಮ ಸೆಕ್ರೆಟರಿಯವರನ್ನು ಕರೆಸಿ, ವಿಜಿಲೆನ್ಸ್ ಸೆಕ್ರೆಟರಿಯವರನ್ನೂ ಕರೆಸಿ ಅದನ್ನು ಎಷ್ಟರ ಮಟ್ಟಿಗೆ ಮಾಡಲಿಕ್ಕೆ ಸಾಧ್ಯವಾಗುತ್ತದೆಂದು ಕೇಳಿದ್ದೇನೆ. ಅದನ್ನು ಮಾಡುತ್ತೇನೆ. ಬೇರೆ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುವುದಕ್ಕೆ ಸಾಧ್ಯತೆ ಇದ್ದರೆ ಖಂಡಿತ ವಾಗಿಯೂ ತೆಗೆದುಕೊಳ್ಳುತ್ತೇನೆ. ಇದರ ಬಗ್ಗೆ ಆನುಮಾನ ಅಗತ್ಯವಿಲ್ಲವೆಂದು ಹೇಳು ತ್ತೇನೆ.

SRI S R. BOMMAI.—The Committee has suggested in its report to attach their property and secure the amount in the interest of the Goverument money. ಒಂಬತ್ತು ತಿಂಗಳಾದರೂ ಏತಕ್ಕೆ ಕ್ರಮ ತೆಗೆದುಕೊಳ್ಳಲಿಲ್ಲ ?

SRI KAGODU THIMMAPPA.—We will take note of that suggestion, and see within 8 days what course of action can be taken.

ಶ್ರೀ ಎಚ್. ಗಂಗಾಧರನ್. —ಗೋಡೌನ್ ರೂಲ್ಸ್ ಪ್ರಕಾರ ಡಿಪಾರ್ಟ್‌ಮೆಂಟ್‌ನವರು ಆಟ್ಯೂಚ್ ಮೆಂಟ್ ಮಾಡುವುದಕ್ಕೆ ಬರುವುದಿಲ್ಲ. ಅವರು ಏನು ಮಾಡುತ್ತಾರೆಂದರೆ ಎಲ್ಲ ತೆಗೆದು ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ಹಾಕುತ್ತಾರೆ ರೆವಿನ್ಯೂ ಡಿಪಾರ್ಟ್‌ಮೆಂಟ್‌ನವರ ಹತ್ತಿರ ಕೇಳಿದರೆ ರೆಕಾರ್ಡ್ ಪತ್ರೆ ಇರುವುದಿಲ್ಲ. ಇಂಥದ್ದು ಸುಮಾರು ಕೇಸ್‌ಗಳು ಇವೆ. ಕೋಟ್ಯಾಂತರ ರೂಪಾಯಿ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ರೆಫರ್ ಮಾಡಿರುವುದರಿಂದ ಅವರು ಕಣ್ಣಲ್ಲಿಯೂ ನೋಡುವುದಿಲ್ಲ ಇದರಿಂದ ಕೋಟ್ಯಾಂತರ ರೂಪಾಯಿ ನಷ್ಟವಾಗಿರುತ್ತದೆ. ಕೆಲವು ಕಂಟ್ರಾಕ್ಟರ್ಸ್ ಸತ್ತು ಕೂಡ ಹೋಗಿದ್ದಾರೆ, ಯಾರ ಮೇಲೆ ರೆಸ್ಪಾನ್ಸಿಬಿಲಿಟಿ ಹಾಕಿದ್ದೀರಿ, ಆ ಆಫೀಸರ್ ಕೂಡ ಸತ್ತು ಹೋಗಿದ್ದಾರೆ. ಆದ್ದರಿಂದ ಏನಾದರೂ ಬದಲಾವಣೆಯನ್ನು ಮಾಡಿ ಒಂದು ಹೊಸದಾಗಿ ಏರ್ಪಾಡು ಮಾಡಿ ಎಂದು ಹೇಳುತ್ತೇನೆ.

Regularisation of Lecturers working in the Government Colleges.

875. SRI K. S. KALAMARI GOWDA (Periya patna).—Will the Minister for Education be pleased to state.—

(a) number of Lecturers working in the Government Colleges as local candidates in the State ? (Yearwise details may be furnished);

(b) whether it is a fact that the Government has assured in the House that their services will be regularised ;

(c) if so, the reasons for delay in regularising their services ?